ಉಪಯೋಗಿಸಿಕೊಂಡು ಮತ್ತು ಆನೆಗಳನ್ನು ಓಡಿಸುವ ತಂಡಗಳ ಕ್ಯಾಂಪ್ ರಚಿಸಿ ತಾತ್ಕಾಲಿಕವಾಗಿ ಅರಣ್ಯ ಪ್ರದೇಶಕ್ಕೆ ಓಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಲೂರು ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿನ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಹಾಗೂ ಆನೆಗಳನ್ನು ಹಿಡಿದು ಬೇರೆ ಕಡೆಗೆ ಸ್ಥಳಾಂತರಿಸಲು ವನ್ಯಜೀವಿ ಸಂರಕ್ಷಣೆ ಕಾಯಿದೆ ಸೆಕ್ಷನ್-12ರ ಪ್ರಕಾರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ರಾಜ್ಯ ಸರ್ಕಾರವು ಅನುಮತಿ ಪಡೆಯಲು ಕೇಂದ್ರ ಸರ್ಕಾರವನ್ನು ಕೋರಿದ್ದು, ಕೇಂದ್ರ ಸರ್ಕಾರದಿಂದ ಅನುಮತಿ ದೊರೆತನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಸರ್ಕಾರದ ಆದೇಶ ಸಂಖ್ಯೆ: ಅಪಜೀ 22 ಎಫ್‌ಡಬ್ಲ್ಯೂಎಲ್ 96, ದಿನಾಂಕ: 12-2-2002 ರಲ್ಲಿ ಬೆಳೆನಷ್ಟಕ್ಕೆ ಹಾಗೂ ಇತರೆ ತೆಂಗು, ಬಾಳೆ, ಅಡಿಕೆ ಮತ್ತು ಕಾಫಿ, ಏಲಕ್ಕಿ ಇತರೆ ಗಿಡಗಳ ನಷ್ಟಕ್ಕೆ ನಿಗದಿ ಪಡಿಸಲಾಗಿರುವ ದರಗಳ ಪ್ರಕಾರ ಪರಿಹಾರವನ್ನು ಮಂಜೂರು ಮಾಡಲಾಗುತ್ತಿದೆ.

878(1323) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಎಷ್ಟು ಜಲ ವಿದ್ಯುತ್ ಯೋಜನೆಗಳಿಗೆ ಮಂಜೂರಾತಿ ದೊರಕಿದೆ.

ಆ) ಅನುಷ್ಠಾನಗೊಂಡಿರುವ ಯೋಜನೆಗಳೆಷ್ಟು..

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಸಕಲೇಶಪುರ ತಾಲ್ಲೂಕಿನಲ್ಲಿ ಒಟ್ಟು 9 ಕಿರುಜಲ ವಿದ್ಯುತ್ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ.

ಆ) 18 ಮೆ.ವ್ಯಾ. ಸಾಮರ್ಥ್ಯದ ಒಂದು ಕಿರುಜಲ ವಿದ್ಯುತ್ ಯೋಜನೆಯು ಅನುಷ್ಠಾನಗೊಂಡಿದೆ.

879(1324) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಜಲಾಶಯದ ನಿರ್ಮಾಣವಾಗಿ ಎಷ್ಟು ವರ್ಷಗಳಾಗಿವೆ?

ಆ) ಈ ಜಲಾಶಯದ ಹಿನ್ನೀರಿನಿಂದ ಶೀತ ಪೀಡಿತವಾದ ಗ್ರಾಮಗಳೆಷ್ಟು?

ಇ) ಅವುಗಳ ಪುನರ್ವಸತಿ ಮತ್ತು ಸಂತ್ರಸ್ಥರ ಪರಿಹಾರ ಕಾರ್ಯ ಯಾವ ಹಂತದಲ್ಲಿದೆ.

ಈ) ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 23 ವರ್ಷಗಳಾಗಿವೆ.

ಆ) ಈ ಜಲಾಶಯದ ಹಿನ್ನೀರಿನಿಂದ ಯಾವುದೇ ಗ್ರಾಮಗಳು ಶೀತ ಪೀಡಿತವಾಗಿರುವುದಿಲ್ಲವೆಂದು ಮುಖ್ಯ ಅಭಿಯಂತರರು, ಹೇಮಾವತಿ ಜಲಾಶಯ ಯೋಜನೆ, ಗೊರೂರುರವರು ತಿಳಿಸಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

880(1325) ಶ್ರೀ ವಿಶ್ವನಾಥ ಹೆಚ್. ಎಂ. (ಸಕಲೇಶಪುರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆ ಅರಣ್ಯ ಇಲಾಖೆಗೆ ಜೆ.ಬಿ.ಐ.ಸಿ. ಯೋಜನೆ ಅಡಿ ಬಂದಿರುವ ಅನುದಾನ ಎಷ್ಟು;

ಆ) ಈ ಯೋಜನೆಯಲ್ಲಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ ಬಂದಿರುವ ಅನುದಾನ ಎಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಬಿಡುಗಡೆಯಾದ ಅನುದಾನ ಲಕ್ಷ ರೂ.ಗಳಲ್ಲಿ

ವರ್ಷ	ಪ್ರಾದೇಶಿಕ ವಿಭಾಗ	ಸಾಮಾಜಿಕ ವಿಭಾಗ	ಒಟ್ಟು
1997–2005 (31–12–2004) ರವರೆಗೆ	1229.46	480.43	1709.89

ಆ) ಸಕಲೇಶಪುರ ತಾಲ್ಲೂಕ್ ಜೆಬಿಐಸಿ ಯೋಜನೆಯ ವ್ಯಾಪ್ತಿಗೆ ಒಳಪಡದ ಕಾರಣ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಆಲೂರು ತಾಲ್ಲೂಕನ್ನು ಸರ್ಕಾರಿ ಆದೇಶ ಸಂಖ್ಯೆ: ಅಪಜೀ 152 ಎಪ್‌ಎಪಿ 99, ದಿನಾಂಕ: 11–10–99 ರಲ್ಲಿ ಜೆಬಿಐಸಿ ಯೋಜನೆಯ ವ್ಯಾಪ್ತಿಗೆ ಸೇರಿಸಿದ ಕಾರಣ ಈ ತಾಲ್ಲೂಕಿಗೆ ಬಿಡುಗಡೆಯಾದ ಅನುದಾನ ಕೆಳಕಂಡಂತಿದೆ.

ವರ್ಷ	ಆಲೂರು ತಾಲ್ಲೂಕು ಪ್ರಾದೇಶಿಕ ವಿಭಾಗ (ರೂ. ಲಕ್ಷಗಳಲ್ಲಿ)	ಷರಾ
1999–2005 (31–12–2004) ರವರೆಗೆ	39.801	ಆಲೂರು ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ವಲಯ ಇರುವುದಿಲ್ಲ.

881(694) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈವರೆಗೂ ಕೆ.ಪಿ.ಟಿ.ಸಿ.ಎಲ್. ಗೆ ಬರಬೇಕಾದ ಬಾಕಿ ಮೊತ್ತವೆಷ್ಟು ಹಾಗೂ ಇದರಲ್ಲಿ ಅಸಲು ಮತ್ತು ಬಡ್ಡಿ ಎಷ್ಟು (ವಿವರ ಒದಗಿಸುವುದು);

ಆ) ಕೆ.ಪಿ.ಟಿ.ಸಿ.ಎಲ್. ಸಿಸ್ಟಂ ಸುಧಾರಣೆಗೆ ಕೇಂದ್ರ ಸರ್ಕಾರದ ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಹಣದ ಸಾಲ ಸೌಲಭ್ಯಗಳನ್ನು ಹಾಗೂ ಅನುದಾನವನ್ನು ಪಡೆಯಲಾಗಿದೆ;

ಇ) ಈ ಹಣವನ್ನು ಯಾವ ಬಾಬ್ತಿಗೆ ಉಪಯೋಗಿಸಲಾಗಿದೆ;